ಇಂಥ ಪ್ರಯತ್ನಗಳು ಅನಗತ್ಯ ಅನ್ನುವುದರಲ್ಲಿ ಇದೆಯೋ ಅಥವಾ ಯಾವ ಮೌಲ್ಯವ್ಯವಸ್ಥೆ ಈಗ ಸ್ಥಾಪಿತವಾಗಿದೆಯೋ ಅದನ್ನು ಉಳಿಸಿಕೊಳ್ಳಬೇಕು ಎನ್ನುವ ಅವರ ಅಪ್ರಜ್ಞಾಪೂರ್ವಕ ಹಟದಲ್ಲಿದೆಯೋ? ಇದರ ಮೂಲ ಎಲ್ಲಿದೆ ಅನ್ನೋದು ನನ್ನ ಹುಡುಕಾಟವಾಯಿತು. ಉದಾ: ಕುಮಾರವ್ಯಾಸ ಭಾರತದ ದ್ರೌಪದಿಯ ಬಗೆಗೆ ನಾನು ಪ್ರಬಂಧ ಮಂಡಿಸಿದಾಗ, ರಹಮತ್, ಅಮರೇಶ್, ಕಿ.ರಂ, ಸ. ಉಷಾ ಮತ್ತಿತರರು ಅದನ್ನು ತುಂಬಾ ಮೆಚ್ಚಿಕೊಂಡರು. ಆದರೆ ತುಂಬಾ ಜನಕ್ಕೆ 'ಇದನ್ನು ಯಾಕೆ ಹೀಗೆ ನೋಡಬೇಕು?' ಎನ್ನುವ ಪ್ರಶ್ನೆ ಹುಟ್ಟಿತು. 'ಕಾವ್ಯ ಅಂದರೆ ಕಾವ್ಯ ಅಷ್ಟೆ. ಅದರಲ್ಲಿ ಹೆಣ್ಣುನೋಟ ಏನು? ಗಂಡುನೋಟ ಏನು?' ಅಂತ ಕೇಳೋದಿಕ್ಕೆ ಶುರು ಮಾಡಿದರು. ಆಗ ನನಗನಿಸಿದ್ದು ಹೆಣ್ಣುನೋಟ ಅಲ್ಲಿ ಗೈರುಹಾಜರಾಗಿದೆ ಎಂದರೆ ಅದು ಆ ಕೃತಿಯ ಮಿತಿಯೇ ಆಗಿರುತ್ತಲ್ವ? ಯಾಕೆ ನಾವು ಮಿತಿಯನ್ನು ಮಿತಿ ಎಂದು ಒಪ್ಪಿಕೊಳ್ಳುವುದಿಲ್ಲ. ಹೆಣ್ಣುನೋಟದಿಂದ ಒಂದು ಕೃತಿಯ ಓದು ಪೂರ್ಣವಾಗುತ್ತೆ ಎನ್ನುವ ನಂಬಿಕೆ ಗಟ್ಟಿಯಾಗತೊಡಗಿತು.

ಆ ಹೊತ್ತಲ್ಲೇ ನನಗಾದ ಜ್ಞಾನೋದಯ ಏನೆಂದರೆ, ಇಲ್ಲಿಯವರೆಗೂ ಕಾವ್ಯಮೀಮಾಂಸೆ ಹೆಣ್ಣಿಗೆ ಮಾಡಿಕೊಂಡು ಬಂದಿರುವ ದೊಡ್ಡ ಅನ್ಯಾಯ ಏನೆಂದರೆ ಕಾವ್ಯ ಅನ್ನುವುದು ಒಟ್ಟಿನಲ್ಲಿ ಮಾನವ ಅನುಭವ, ಆದ್ದರಿಂದ ಅದರಲ್ಲಿ ಹೆಣ್ಣು/ಗಂಡು ಅಂತ ಬೇರೆ ಬೇರೆ ಬರಲ್ಲ ಅಂತ ಹೇಳಿಕೊಂಡು ಬಂದರು. ಆದರೆ ಉದ್ದಕ್ಕೂ ಗಂಡಿನ ಅನುಭವವನ್ನು ಮಾನವ ಅನುಭವ ಎಂದು ಹೇಳಿಕೊಂಡು ಬಂದರೇ ವಿನಃ ಹೆಣ್ಣಿನ ಅನುಭವ ಅದರ ವೈಶಿಷ್ಟ್ಯಗಳಲ್ಲಿ, ಅದರ ಎಲ್ಲ ಆಯಾಮಗಳಲ್ಲಿ, ಅದರ ನಿಜಗಳಲ್ಲಿ, ಅದರ ಆಳಗಳಲ್ಲಿ ಅದು ಕಾಣಿಸಿಕೊಂಡೇ ಇರಲಿಲ್ಲ. ಗಂಡು ನೋಡುತ್ತಾ ಇರುವ ಹೆಣ್ಣು, ಗಂಡು ಅಪೇಕ್ಷಿಸುತ್ತಾ ಇರುವ ಹೆಣ್ಣು, ಗಂಡಿಗೆ ಬೇಕಾದ ಹೆಣ್ಣು, ಇಂಥ ಚಿತ್ರಗಳನ್ನು ಕಟ್ಟಿಕೊಡುತ್ತಿರುವ ಕಾವ್ಯಗಳನ್ನೇ ನಾವು ಮಾನವ ಅನುಭವದ ಕಾವ್ಯ ಅಂತ ಹೇಳಿದ್ದೇವೆ. ತೊಡಕು ಇರುವುದು ಅಲ್ಲಿ ಎಂಬುದು ನನ್ನ ಅರಿವಿಗೆ ಬಂತು. ಆ ತೊಡಕನ್ನು ಬಿಡಿಸುವ ಪ್ರಯತ್ನವನ್ನು ನಾನು ಮಾಡತೊಡಗಿದೆ. ಪ್ರಾರಂಭಿಕ ಘಟ್ಟದಲ್ಲಿ ಸ್ತ್ರೀವಾದಕ್ಕೆ ಬಂದ ಪೆಡಸಾದ ಪ್ರತಿಕ್ರಿಯೆ ಅನ್ನೋದು ಎಲ್ಲಿದೆ ಅಂತಂದ್ರೆ, ಸ್ತ್ರೀವಾದಿ ಆಶಯಗಳು ಕಾರ್ಯಗತ ಆಗೋದು ಅವರಿಗೆ ಇಷ್ಟ ಇರಲಿಲ್ಲ ಮತ್ತು ಅದರ ಅಗತ್ಯವನ್ನು ಅರ್ಥ ಮಾಡಿಕೊಳ್ಳೋದಕ್ಕೆ ಬೇಕಾಗಿರುವ ಸಂವೇದನೆಯ ಕೊರತೆಯಿತ್ತು. ಆದ್ದರಿಂದ, ಕಠಿಣವಾದ, ಬಹಳ ಸ್ಪಷ್ಟವಾದ ತಾತ್ವಿಕತೆಯಲ್ಲೇ ನಾವು ಅದನ್ನ ಎಸ್ಟಾಬ್ಲಿಷ್ ಮಾಡಬೇಕಾಯ್ತು. ನೀವು ಕುವೆಂಪು ಅವರನ್ನ ಒಂದು ಗ್ರೀನ್ ರೀಡಿಂಗ್‌ಗೆ ಒಳಗುಮಾಡಬಹುದಾದ್ರೆ, ಕಟ್ಟೀಮನಿಯವರನ್ನ ಒಂದು ರೆಡ್ ರೀಡಿಂಗ್‌ಗೆ ನೀವು ಒಳಗುಮಾಡಬಹುದಾದ್ರೆ, ಆ ಎಲ್ಲಾ ಲೇಖಕರನ್ನೂ ಒಂದು ವುಮೆನ್ ರೀಡಿಂಗಿಗೂ ಒಳಗುಮಾಡಲೇಬೇಕಾದ ಅಗತ್ಯ ಖಂಡಿತಾ ಇದೆ ಎಂದು ಸ್ಪಷ್ಟಪಡಿಸಬೇಕಾಯಿತು. ವಿಜಯಾ ದಬ್ಬೆ ಇದರ ಮೊದಲಗಿತ್ತಿ. ಸುಮಿತ್ರಾಬಾಯಿಯವರ ಪಾತ್ರ ಕೂಡಾ ಇಲ್ಲಿ ಬಹಳ ಮಹತ್ವದ್ದು. 'ಬಸವಣ್ಣನವರ ವಚನಗಳಲ್ಲಿ ಸ್ತ್ರೀವಾದಿ ದೃಷ್ಟಿಕೋನ' ಕುರಿತು ನಾನು ಪ್ರಬಂಧ ಮಂಡಿಸಿದಾಗ ನನಗೆ ತೀವ್ರ ವಿರೋಧ ಎದುರಾಯಿತು. ರಹಮತ್ ತರೀಕೆರೆ ಒಬ್ಬರೆ ನನ್ನ ಜೊತೆ ನಿಂತವರು ಆ ಗಳಿಗೆಯಲ್ಲಿ. ಅವರು ಹೇಳಿದರು, 'ಆಶಾ, ಎಲ್ಲ ಮಹತ್ವದ ಕಾವ್ಯಗಳನ್ನು ಹೀಗೊಂದು ಹೆಣ್ಣಿನ ಮರು ಓದಿಗೆ ಒಳಪಡಿಸಬೇಕು; ಆಗ ನಮಗೆ ಇನ್ನೊಂದು ಸತ್ಯ ಕಾಣಿಸತ್ತೆ'. ಅಂತ.

ಈ ಪ್ರಯತ್ನಗಳು ಸಮೃದ್ಧ ಪರಂಪರೆ ಇರುವ ಎಲ್ಲ ಭಾಷಿಕ ಸಾಹಿತ್ಯಗಳಲ್ಲೂ ಆಗಲೇಬೇಕು ಮತ್ತು ಇದನ್ನು ನಾವು ಹೆಣ್ಣು, ಹೆಣ್ಣಿಗಾಗಿ, ಹೆಣ್ಣಿಗೋಸ್ಕರ ಮಾಡ್ತಾ ಇರುವುದು ಅಂತ ಖಂಡಿತ ತಿಳಿಯಬಾರದು. ಬದಲಿಗೆ ಪಿತೃಸಂಸ್ಕೃತಿಯ ಗಾಢವಾಗಿ ಬೇರುಬಿಟ್ಟ ಪೂರ್ವಗ್ರಹಗಳ ಹಿನ್ನೆಲೆಯಲ್ಲಿ ಕಲೆಯ ಶಕ್ತಿಯ ಅನಾವರಣದ ಮೂಲಕ ಈ ಪೂರ್ವಗ್ರಹಗಳನ್ನು ತೊಡೆದುಹಾಕುವ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳಿರಬೇಕು. ಯಾಕಿಂಥ ಮಾತುಗಳನ್ನು ಆಡುತ್ತಿದ್ದೇನೆ ಎಂದರೆ ಈ ದೇಶದ